# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕಃ 12–04–2012 ರಂದು ನಡೆಸಲಾದ ವಿಷಯಗಳ ಸಭೆಯ ನಡವಳಿಗಳು

| ಕ್ರ. ಸಂ. | ಹಾಜರಿದ್ದ ಸಮಿತಿಯ ಪದಾಧಿಕಾರಿಗಳು ಶ್ರೀಯುತರಾದ | | ಕ್ರ. ಸಂ. | ಹಾಜರಿದ್ದ ಅಧಿಕಾರಿಗಳು |
|---|---|---|---|---|
| 01 | ಹೆಚ್.ಜಿ.ರಾಮಚಂದ್ರ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 02 | ಹೆಚ್.ಎಸ್.ಲಲಿತಾ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು, ( ರಸ್ತೆ & ಮೂಲಭೂತ, ಪೂರ್ವ, ಕಾ.ಪಾ.ಅ(ಯೋಜನೆ) ದಾಸರಹಳ್ಳಿ ಮತ್ತು ಮಹದೇವಪುರ |
| 03 | ಎಮ್.ಗೋಪಿ | ಸದಸ್ಯರು | | |
| 04 | ಮುನೀಂದ್ರ ಕುಮಾರ್.ಕೆ.ಎ. | ಸದಸ್ಯರು | | |
| 05 | ಎಂ.ಕೃಷ್ಣಪ್ಪ | ಸದಸ್ಯರು | | |
| 06 | ಹೆಚ್.ನಾರಾಯಣ | ಸದಸ್ಯರು | | |
| 07 | ಸೀಮಾ ಖಾನಂ | ಸದಸ್ಯರು | | |
| 08 | ಮುನಿಸಂಜೀವಯ್ಯ | ಸದಸ್ಯರು | | |
| 09 | ಲೋಕೇಶ್ | ಸದಸ್ಯರು | | |
| 10 | ಎಂ.ಮುನಿಸ್ವಾಮಿ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲಿಸಲಾಯಿತು)

### 01] ವಿಷಯ ಸಂಖ್ಯೆ:185/2011–12

ವಿಶೇಷ ಆಯುಕ್ತರವರು ದಿನಾಂಕಃ23–01–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆಃ 169ರ ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 200.00 ಲಕ್ಷಗಳಿಗೆ 2010–11ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ತಯಾರಿಸಿ ಅಗತ್ಯ ಅನುಮೋದನೆ ಪಡೆದು, ಕಾಮಗಾರಿ ಸಂಖ್ಯೆಃ 169–12–00001ರಂತೆ ಈಗಾಗಲೇ ಕಾಮಗಾರಿ ಸಂಕೇತ ಲಭ್ಯವಾಗಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆಃ ತೆಆಸ್ಥಾಸ/257/2010–11 ದಿನಾಂಕಃ 23–03–2011ರಂತೆ ಗೋಷ್ವಾರೆ 3ರಲ್ಲಿನ ಕ್ರಮ ಸಂಖ್ಯೆ 30ರಲ್ಲಿ ವಾರ್ಡ್ 169 ಕಿತ್ತೂರು ರಾಣಿ ಚೆನ್ನಮ್ಮ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ. 200.00 ಲಕ್ಷಗಳಿಗ ಹೆಚ್ಚುವರಿ ಅನುದಾನಕ್ಕೆ ಅನುಮೋದನೆ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 23–01–2012ರ ವಿಶೇಷ ಆಯುಕ್ತರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುತ್ತಾ ಸದರಿ ಕಾಮಗಾರಿಯನ್ನು ಜರೂರು ಅನುಷ್ಠಾನಗೊಳಿಸಬೇಕಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸುವಂತೆ ನಿರ್ಣಯಿಸಲಾಯಿತು.**

## 02] ವಿಷಯ ಸಂಖ್ಯೆ:195/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕಃ 08-12-2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ-ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಮುಸ್ಲಿಂ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣಕ್ಕೆ ಅಗತ್ಯವಿರುವ ಸ್ಮಶಾನದ ಜಾಗವನ್ನು ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆ ಮತ್ತು ಈಗಾಗಲೇ ನಿರ್ಮಿಸಿರುವ ನೀರಿನ ಟ್ಯಾಂಕ್‌ಅನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದ ಮೇರೆಗೆ Dismantling of existing compound wall and construction of new size stone masonry compound wall and construction of over head tank with water supply facility in the premises of Muslim Burial ground in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 34.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕಃ10-01-2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 34.00ಲಕ್ಷಗಳ ಕಾಮಗಾರಿಗೆ P-0541 ಲೆಕ್ಕ ಶೀರ್ಷಿಕೆಯಲ್ಲಿ ಜಾಬ್ ನಂಬರ್ 136-11-000019ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ಮಾಹಿತಿಗಾಗಿ ಮುಂದೂಡಿದೆ.**

## 03] ವಿಷಯ ಸಂಖ್ಯೆ:197/2011-12

ವಿಶೇಷ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕಃ 08-12-2010ರಂದು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ಮೈಸೂರು ರಸ್ತೆ ಮತ್ತು ಪಾದರಾಯನಪುರ-ಹೊಸಹಳ್ಳಿ ರಸ್ತೆ ಅಗಲೀಕರಣದ ಸಂಬಂಧ ಅಗತ್ಯ ಭೂಸ್ವಾಧೀನದ ಬಗ್ಗೆ ಸ್ಥಳ ತಪಾಸಣೆ ನಡೆಸುವ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ ಸ್ಮಶಾನದ ಪ್ರದೇಶದಲ್ಲಿ ರಸ್ತೆ ಅಗಲೀಕರಣದ ಸಲುವಾಗಿ ಸುಮಾರು 6000 ಚದರಡಿಗಳ ಜಾಗದ ಅಗತ್ಯವಿದ್ದು ಇದರಿಂದಾಗಿ ಭಾದಿತಗೊಳ್ಳುವ ಸಮಾಧಿಗಳನ್ನು ಸ್ಥಳಾಂತರಿಸಲು ಪರ್ಯಾಯ ಜಾಗವನ್ನು ಕೋರಿದ್ದ ಮೇರೆಗೆ ಗೋರಿಪಾಳ್ಯದ ವಿದ್ಯುತ್ ಚಿತಾಗಾರದ ಪಕ್ಕದಲ್ಲಿರುವ ಸುಮಾರು 4,500 ಚರಡಿಗಳ ಜಾಗವನ್ನು ನೀಡಲು ಉದ್ದೇಶಿಸಿ ಮೈಸೂರು ರಸ್ತೆ ಅಗಲೀಕರಣಕ್ಕೆ ಅಗತ್ಯವಿದ್ದ ಜಾಗ ಸ್ವಾಧೀನಪಡಿಸಿಕೊಂಡು ಹಾಗೆ ಕೆಡವಲಾಗುವ ಕಾಂಪೌಂಡ್ ಗೋಡೆಯನ್ನು ಪಾಲಿಕೆವತಿಯಿಂದ ನಿರ್ಮಿಸಿಕೊಡುವ ಕಾಮಗಾರಿಯನ್ನು ಪ್ರಾರಂಭಿಸಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಮೇರೆಗೆ Dismantling of existing compound wall and construction of new size stone masonry compound wall to the premises of Christan Cemetry in Mysore road ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ದರಗಳನ್ನಾಧರಿಸಿ ತಯಾರಿಸಿದ ರೂ. 20.00 ಲಕ್ಷಗಳ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಲು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಲು ಮಾನ್ಯ ಆಯುಕ್ತರು ದಿನಾಂಕಃ10-01-2011ರಂದು ಅನುಮೋದನೆಯನ್ನು ನೀಡಿರುತ್ತಾರೆ. ಸದರಿ ರೂ. 20.00ಲಕ್ಷಗಳ ಕಾಮಗಾರಿಗೆ P-0541 ಲೆಕ್ಕ

ಶೀರ್ಷಿಕೆಯಲ್ಲಿ ಜಾಬ್ ನಂಬರ್ 141-11-000018ರಂತೆ ನೀಡಿದ್ದು, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ.

ಆದ್ದರಿಂದ ಸದರಿ ಕಾಮಗಾರಿಯು ತುರ್ತಾದ್ದರಿಂದ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ನಿರ್ವಹಿಸಲಾಗುತ್ತಿರುವುದರಿಂದ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಪ್ರಗತಿಯಲ್ಲಿರುವ ಕಾಮಗಾರಿಯ ಸ್ಥಿರೀಕರಣಕ್ಕೆ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರವರ ಟಿಪ್ಪಣಿ.

**ನಿರ್ಣಯಃ ಮಾಹಿತಿಗಾಗಿ ಮಂದೂಡಿದೆ.**

## 04] ವಿಷಯ ಸಂಖ್ಯೆಃ211/2011-12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಯಮಲೂರು ಮತ್ತು ಬೆಳ್ಳಂದೂರು ಕೆರೆಯ ಕೋಡಿಗೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಸ್ಥಳೀಯ ಶಾಸಕರು, ಹಾಗೂ ಜನಪ್ರತಿನಿಧಿಗಳು, ಸಾರ್ವಜನಿಕರ ಕೋರಿಕೆಯ ಮೇರೆಗೆ, ಪೂಜ್ಯ ಮಹಾಪೌರರು ತುರ್ತು ಕಾಮಗಾರಿಯಲ್ಲಿ ಮೀಸಲಿಟ್ಟ ನಿಧಿಯಲ್ಲಿ (ಸಿ.ಆರ್.ಎಫ್) ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು, ಈ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಯುಕ್ತರು ದಿನಾಂಕಃ 15-11-2010ರ ಅನುಮೋದನೆ ನೀಡಿದ್ದು ಮುಖ್ಯ ಲೆಕ್ಕಾಧಿಕಾರಿಗಳಿಂದ ಜಾಬ್ ಸಂಖ್ಯೆ:150-11-000025ಅನ್ನು ನೀಡಲಾಗಿರುತ್ತದೆ. ಈ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಜಂಟಿ ಆಯುಕ್ತರು (ಮಹದೇವಪುರ) ರವರು ಸಂಖ್ಯೆಃ ಜಂಆ/ಮ.ವ/ಅ.ಅ/217/10-11 ದಿನಾಂಕಃ 14-02-2011ರಲ್ಲಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರು(ಯೋಜನೆ) ರವರ ಸಂಖ್ಯೆಃ ಅಇ/(ಕ-1)01/2011-12 ದಿನಾಂಕಃ 14-02-2011ರಲ್ಲಿ ನೀಡಿರುತ್ತಾರೆ.

ಸದರಿ ಕಾಮಗಾರಿಗೆ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ರೂ. 2,53,04,147-10 ಲಕ್ಷಗಳಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಸದರಿ ಮೊದಲನೇ ಕರೆಯಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದ ಕಾರಣ ಮರು ಟೆಂಡರ್ ಅನ್ನು ದಿನಾಂಕಃ 05-05-2011ರಂದು ಆಹ್ವಾನಿಸಿದ್ದು, ಎರಡನೇ ಬಾರಿ ಏಕ ಬಿಡ್‌ದಾರರು ಭಾಗವಹಿಸಿದ್ದು, ಸದರಿ ಟೆಂಡರ್‌ಅನ್ನು ಮುಖ್ಯ ಅಭಿಯಂತರರು ತಿರಸ್ಕರಿಸಿರುತ್ತಾರೆ. ನಂತರ ಮತ್ತೊಮ್ಮೆ ಟೆಂಡರ್‌ಅನ್ನು ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಗುತ್ತಿಗೆದಾರರರು ಭಾಗವಹಿಸಿದ್ದು, ತಾಂತ್ರಿಕ ಅರ್ಹತೆ ಪಡೆದ ಗುತ್ತಿಗೆದಾರರ ಹಣಕಾಸಿನ ಬಿಡ್‌ಅನ್ನು ಮುಖ್ಯ ಅಭಿಯಂತರರು (ಯೋಜನೆ) ರವರ ಅನುಮೋದನೆಯಂತೆ ದಿನಾಂಕಃ 30-06-2011ರಂದು ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿದ್ದು, ಅವರ ಬಿಡ್ ಮೌಲ್ಯ ಮಾಪನ ಮಾಡಲಾಗಿರುತ್ತದೆ. ಅವರು ನಮೂದಿಸಿರುವ ದರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು / ಕಡಿಮೆ | ಷರಾ |
|---|---|---|---|---|---|
| 1 | ಶ್ರೀ.ಎಸ್.ಆರ್.ಗಣೇಶ್ | 25304147-10 | 27196950.75 | 1.16 ಕಡಿಮೆ | L-1 |
| 2 | ಶ್ರೀ.ಜಿ.ರಾಜ | | 28017038.81 | 1.00 ಹೆಚ್ಚು | L-2 |
| 3 | ಶ್ರೀ.ಮದನ್ ಮೋಹನ್‌ರೆಡ್ಡಿ | | 30636782.95 | 11.33 ಹೆಚ್ಚು | L-3 |

ಸದರಿ ಕಾಮಗಾರಿಗೆ ಶ್ರೀ.ಎಸ್.ಆರ್.ಗಣೇಶ್ ರವರು ಕನಿಷ್ಠ ದರ ನಮೂದಿಸಿದ್ದು, ಇದು ಅಂದಾಜು ಪಟ್ಟಿಯ ದರಗಳಂತೆ ಶೇಕಡ 1.16 ರಷ್ಟು ಕಡಿಮೆಯಾಗಿರುತ್ತದೆ. ಸದರಿ 2010–11ನೇ ಸಾಲಿನ ತ್ರೈಮಾಸಿಕ ದರಗಳಿಗೆ ಹೋಲಿಸಿದರೂ ಸಹ ಕಡಿಮೆಯಾಗಿರುತ್ತದೆ. ಹಾಗೂ ಮಾನ್ಯ ಆಯುಕ್ತರು ಸದರಿ ಟೆಂಡರ್‌ಅನ್ನು ಶ್ರೀ.ಎಸ್.ಆರ್.ಗಣೇಶ್ ಗುತ್ತಿಗೆದಾರರಿಗೆ ಅನುಮೋದಿಸಿರುವ ಹಿನ್ನಲೆಯಲ್ಲಿ ಮತ್ತು ಸ್ಥಳೀಯ ಶಾಸಕರು ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಯನು ತ್ವರಿತವಾಗಿ ಕೈಗೊಳ್ಳಲು ಸೂಚನೆ ನೀಡಲಾದ ಹಿನ್ನಲೆಯಲ್ಲಿ ಸದರಿ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ದಿನಾಂಕಃ 08–09–2011ರಂದು ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಗೆ ಕನಿಷ್ಠದರ ನಮೂದಿಸಿದ ಗುತ್ತಿಗೆದಾರರಾದ ಶ್ರೀ. ಎಸ್.ಆರ್.ಗಣೇಶ್ ರವರ ಗುತ್ತಿಗೆಯ ಮೊತ್ತ ರೂ. 2,71,96,951–00(ರೂಪಾಯಿ ಎರಡೂ ಕೋಟಿ ಎಪ್ಪತ್ತೊಂದು ಲಕ್ಷದ ತೊಂಬತ್ತಾರು ಸಾವಿರದ ಒಂಬೈನೂರ ಐವತ್ತೊಂದು ಮಾತ್ರ) ಗಳಾಗಿದ್ದು ಸದರಿ ಕಾಮಗಾರಿಗೆ ಟೆಂಡರ್‌ಅನ್ನು ಅನುಮೋದನೆಗಾಗಿ ಹಾಗೂ ಸಾರ್ವಜನಿಕ ಹಿತದೃಷ್ಟಿ ಹಾಗೂ ಸ್ಥಳೀಯ ಶಾಸಕರ ಸೂಚನೆಯ ಮೇರೆಗೆ ಕಾಮಗಾರಿಯನ್ನು ಪ್ರಾರಂಭಿಸಿರುವ ಕ್ರಮಕ್ಕೆ ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 05] ವಿಷಯ ಸಂಖ್ಯೆಃ212/2011–12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ಕೋಣನಕುಂಟೆ ವಾರ್ಡ್ ನಂಃ 195 ಕೊತ್ತನೂರು ಕೆರೆಯಿಂದ ಚುಂಚನಘಟ್ಟ ಕೆರೆಗೆ ಸಂಪರ್ಕಿಸುವ ರಾಜಕಾಲುವೆಯನ್ನು ಇದೇ ವಾರ್ಡಿನ ಶ್ರೇಯಸ್ಸ್ ಕಾಲೋನಿಯಲ್ಲಿ ರಾಜಕಾಲುವೆ ಚುಂಚಘಟ್ಟ ಕೆರೆಗೆ ಸೇರುವ ಜಾಗದಲ್ಲಿ (ಸರ್ವೆ ನಂಃ7 ಮತ್ತು 8) ಒತ್ತುವರಿಯಾಗಿದ್ದು, ಅದನ್ನು ತೆರವುಗೊಳಿಸಲಾಗಿಚೆ. ಶ್ರೇಯಸ್ಸ್ ಕಾಲೋನಿಯಿಂದ ಸರ್ವೆ ನಂಃ 7 ಮತ್ತು 8 ಮೂಲಕ ಚುಂಚನಘಟ್ಟ ಕೆರೆಗೆ ಸೇರುವ ರಾಜಕಾಲುವೆ ಅಭಿವೃದ್ಧಿಯ ಅವಶ್ಯಕವಿದ್ದು, ಸದರಿ ಕಾಮಗಾರಿಗಾಗಿ ರೂ. 90.00ಲಕ್ಷ ಗಳಿಗೆ ಅಂದಾಜು ಪಟ್ಟಿ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಕರ್ನಾಟಕ ಪಾರದರ್ಶಕ ನಿಯಮಾವಳಿಯಂತೆ ಟೆಂಡರ್ ಕರೆದು (tender notification no:EE/SWD/BHZ/TEND/02-11-12, date: 21-09-2011), ಒಬ್ಬರೇ ಗುತ್ತಿಗೆದಾರರು ಭಾಗವಹಿಸಿದ ಕಾರಣ, ಎರಡನೇ ಬಾರಿ ಟೆಂಡರ್‌ಅನ್ನು ದಿನಾಂಕಃ 02–11–2011ರಂದು ಕರೆಯಲಾಗಿದ್ದು, ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, Tender Evaluation ಮಾಡಿದಾಗ ಶ್ರೀ.ಗಿರಿರಾಜು.ಎಸ್.ಆರ್. ಇವರು ರೂ. 89,01,2160.13ಗಳನ್ನು ನಮೂದಿಸಿದ್ದು 2010–11ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇಕಡ 0.70ರಷ್ಟು ಕಡಿಮೆ ಇದ್ದು, ಮತ್ತು 2011–12ರ ದರಪಟ್ಟಿಗೆ ಹೋಲಿಸಿದಾಗ ಶೇಕಡ 6.56ರಷ್ಟು ಕಡಿಮೆ ದರವನ್ನು ನಮೂದಿಸಿದ್ದು, ಇವರು L1 ಗುತ್ತಿಗೆದಾರರಾಗಿರುತ್ತಾರೆ. ಶ್ರೀ. ಚೆರುಕುರಿ ಬೋಜೇಶ್ವರರಾವ್ ಇವರು ರೂ. 98,58,272.78ಅನ್ನು ನಮೂದಿಸಿದ್ದು, ಇವರು L2 ಆಗಿರುತ್ತಾರೆ.

ಈ ಕಾಮಗಾರಿಯು ಅವಶ್ಯಕತೆ ಇರುವುದರಿಂದ ಶೇಕಡ 0.70ರಷ್ಟು 2010–11ನೇ ಸಾಲಿನಲ್ಲಿ ಮತ್ತು ಶೇಕಡ 6.56ರಷ್ಟು 2011–12ನೇ ಸಾಲಿನ ದರಗಳಿಗೆ ಕಡಿಮೆ ದರ ನಮೂದಿಸಿರುವ ಶ್ರೀ.ಗಿರಿರಾಜು.ಎಸ್.ಆರ್. ಇವರಿಗೆ ಟೆಂಡರ್ ರೂ. 89,01,216.13ಗಳ ಮೊತ್ತಕ್ಕೆ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 27–03–2012ರ ಟಿಪ್ಪಣಿ.

ಅಪರ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಎಂ.ಇ.ಐ. ಬಡಾವಣೆಯಲ್ಲಿ "Construction of outdoor stadium in liu of Indoor statium at MEI Play ground" Bagalgunte, Dasarahalli, Ist phase Est. cost. Rs. 480.00 lakhs(Four hundred and Eighty Lakhs only) ಈ ಕಾಮಗಾರಿಯು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಲ್ಲಿ ಅನುಮೋದನೆಗೊಂಡು, ಜಾಬ್ ಕೋಡ್. 303-11-000048 ದೊರೆತಿರುತ್ತದೆ.

ಮುಂದುವರೆದು ಸದರಿ ಕಆಮಗಾರಿಯಾದ "ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯ ಬದಲಾಗಿ ಹೊರಾಂಗಣ ಕ್ರೀಡಾಂಗಣ ನಿಮಾಣ ಕಾಮಗಾರಿ" ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಅಂದಾಜುಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ದಿನಾಂಕಃ 22-03-2012ರಂದು, ಕಡತದ ಟಿಪ್ಪಣಿ ಹಾಳೆ ಕಂಡಿಕೆ ಸಂಖ್ಯೆ:105ರಲ್ಲಿ ಮಾನ್ಯ ಆಯುಕ್ತರು" ಈ ಕಾಮಗಾರಿಯನ್ನು ಟೆಂಡರ್ ಕರೆದು ಸಮಗ್ರವಾಗಿ ಇಂಪ್ಲಿಮೆಂಟ್ ಮಾಡಲು ಸಮಿತಿಯ ಮಂಡಿಸುವಂತೆ ಆದೇಶಿಸಿರುವ ಮೇರೆಗೆ ಸದರಿ ಕಾಮಗಾರಿಗೆ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 28-03-2012ರ ಅಪರ ಆಯುಕ್ತರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 06] ವಿಷಯ ಸಂಖ್ಯೆ:213/2011-12

ಅಪರ ಆಯುಕ್ತರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ಎಂ.ಇ.ಐ. ಬಡಾವಣೆಯಲ್ಲಿ "Construction of outdoor stadium in liu of Indoor statium at MEI Play ground" Bagalgunte, Dasarahalli, Ist phase Est. cost. Rs. 480.00 lakhs(Four hundred and Eighty Lakhs only) ಈ ಕಾಮಗಾರಿಯು ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯಲಲಿ ಅನುಮೋದನೆಗೊಂಡು, ಜಾಬ್ ಕೋಡ್. 303-11-000048 ದೊರೆತಿರುತ್ತದೆ.

ಮುಂದುವರೆದು ಸದರಿ ಕಆಮಗಾರಿಯಾದ "ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯ ಬದಲಾಗಿ ಹೊರಾಂಗಣ ಕ್ರೀಡಾಂಗಣ ನಿಮಾಣ ಕಾಮಗಾರಿ" ಕೈಗೊಳ್ಳಲು ಯೋಜನೆ ರೂಪಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಅಂದಾಜುಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ದಿನಾಂಕಃ 22-03-2012ರಂದು, ಕಡತದ ಟಿಪ್ಪಣಿ ಹಾಳೆ ಕಂಡಿಕೆ ಸಂಖ್ಯೆ:105ರಲ್ಲಿ ಮಾನ್ಯ ಆಯುಕ್ತರು" ಈ ಕಾಮಗಾರಿಯನ್ನು ಟೆಂಡರ್ ಕರೆದು ಸಮಗ್ರವಾಗಿ ಇಂಪ್ಲಿಮೆಂಟ್ ಮಾಡಲು ಸಮಿತಿಯ ಮಂಡಿಸುವಂತೆ ಆದೇಶಿಸಿರುವ ಮೇರೆಗೆ ಸದರಿ ಕಾಮಗಾರಿಗೆ ಆಡಳಿತಾತ್ಮಕ/ತಾಂತ್ರಿಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 28-03-2012ರ ಅಪರ ಆಯುಕ್ತರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ.**

## 07] ವಿಷಯ ಸಂಖ್ಯೆ:214/2011-12

ವಿಶೇಷ ಆಯುಕ್ತರು(ಯೋಜನೆ) ರವರು ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಸವನಗುಡಿ ವಾರ್ಡ್ ಸಂಖ್ಯೆ: 154ರ ವ್ಯಾಪ್ತಿಯ ಸುಬ್ಬರಾಮಚೆಟ್ಟಿ ರಸ್ತೆ ಮತ್ತು ಎಸ್.ಎಸ್.ಎಂ.ಶಾಲೆಯಿಂದ ವಿದ್ಯಾಪೀಠದವರೆಗೆ ರಸ್ತೆ ಡಾಂಬರೀಕರಣ ಕಾಮಗಾರಿಗೆ ರೂ. 110.00 ಲಕ್ಷಗಳ ಅಂದಾಜು ಪಟ್ಟಿಯು ಅನುಮೋದನೆಗೊಂಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು E-procurement ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಒಟ್ಟು 5 ಗುತ್ತಿಗೆದಾರರರು ಭಾಗವಹಿಸಿದ್ದು, ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ 3 ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರುಗಳ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ.ವಿ.ಎಲ್.ಮುನಿರಾಜು ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಶೇಕಡವಾರು ಹೆಚ್ಚು/ಕಡಿಮೆ(2010-11)ದರಗಳಿಗೆ ಹೋಲಿಸಿದಾಗ) | ಷರಾ |
|---|---|---|---|---|---|
| 1 | ಶ್ರೀ.ವಿ.ಎಲ್.ಮುನಿರಾಜು | 1,05,76,219-59 | 9064141.00 | 14.29% ಕಡಿಮೆ | L-1 |
| 2 | ಶ್ರೀ.ವಿ.ವೆಂಕಟಸ್ವಾಮಿ | | 10020137.80 | 5.25%ಕಡಿಮೆ | L-2 |
| 3 | ಶ್ರೀ.ಎಸ್.ಸತೀಶ್ | | 10263039.00 | 2.96%ಕಡಿಮೆ | L-3 |

ಸದರಿ ಟೆಂಡರ್‌ನಲ್ಲಿ ಕನಿಷ್ಠ ದರ ನಮೂದಿಸಿರುವ L-1ಗುತ್ತಿಗೆದಾರರಾದ ಶ್ರೀ. ವಿ.ಎಲ್.ಮುನಿರಾಜು ರವರ ಟೆಂಡರ್‌ಅನ್ನು 2010-11ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 14.29% ರಷ್ಟು ಕಡಿಮೆ ಇರುತ್ತದೆ.

ಸದರಿ ಟೆಂಡರ್‌ಅನ್ನು ಮಾನ್ಯ ಆಯುಕ್ತರು ಅನುಮೋದಿಸಿದ್ದು, ಆಯುಕ್ತರವರ ಆಂತರಿಕದ ಟಿಪ್ಪಣಿ ಸಂಖ್ಯೆಃ ಆ/ಪಿಆರ್/5159/11-12 ದಿನಾಂಕಃ 02-07-2011ರಲ್ಲಿ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆ ಬಗ್ಗೆ ರಾಜ್ಯ ಪತ್ರದಲ್ಲಿ ಆದೇಶ ಹೊರಡಿಸಲಾಗಿದ್ದು, ಈ ಆದೇಶದನ್ವಯ ರೂ. 50.00ಲಕ್ಷ ಮೇಲ್ಪಟ್ಟ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆ ಮತ್ತು ರೂ. 60.00 ಲಕ್ಷಗಳಿಗಿಂತ ಮೇಲ್ಪಟ್ಟು ಟೆಂಡರ್ ಅನುಮೋದನೆ ಪ್ರಾಧಿಕಾರವು ಸ್ಥಾಯಿ ಸಮಿತಿಯದ್ದಾಗಿರುವುದರಿಂದ, ಸದರಿ ಕಾಮಗಾರಿಗೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ವಿ.ಎಲ್.ಮುನಿರಾಜು ರವರ ಗುತ್ತಿಗೆ ಮೊತ್ತ ರೂ. 90,64,141.00(ತೊಂಬತ್ತು ಲಕ್ಷದ ಅರವತ್ತ ನಾಲ್ಕು ಸಾವಿರದ ನೂರ ನಲವತ್ತೊಂದು) ಗಳಿಗೆ ಅನುಮೋದನೆಯನ್ನು ಮತ್ತು ಸದರಿ ಕಾಮಗಾರಿ ಅಂದಾಜುಪಟ್ಟಿ ಮೊತ್ತ ರೂ. 110.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಮೇಲೆ ತಿಳಿಸಿರುವ ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಂಡು ಕಾರ್ಯಾದೇಶ ನೀಡಿರುವುದನ್ನು ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ದಿನಾಂಕಃ 28-03-2012ರ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 08] ವಿಷಯ ಸಂಖ್ಯೆಃ215/2011-12

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೋರಮಂಗಲ ಕಣಿವೆಯ ಮುಖ್ಯ ಮಳೆ ನೀರುಗಾಲುವೆ K-100, ವಾರ್ಡ್ ನಂಃ 116ರ ವ್ಯಾಪ್ತಿಯಲ್ಲಿ ಹರಿಯುತ್ತಿದ್ದು, ಈ ಭಾಗದ ಸರಪಳಿ 5170 ಮೀಟರ್‌ನಲ್ಲಿ ಹಾಲಿ ಇರುವ ಸೇತುವೆಯು ತುಂಬಾ ಕಿರಿದಾಗಿರುತ್ತದೆ. ಹಾಲಿ ಸೇತುವೆಯ ಎರಡು ಭಾಗದಲ್ಲಿ ಇರುವ ರಸ್ತೆಯನ್ನು 33.0 ಮೀ ಅಗಲಕ್ಕೆ ವಿಸ್ತರಣೆ ಮಾಡಿರುತ್ತಾರೆ. ಆದರೆ ರಸ್ತೆಯ ಸೇತುವೆಯ ಅಗಲವು 16.60 ಮೀ. ಮಾತ್ರ ಇರುತ್ತದೆ. ಈಗ ಈ ಸೇತುವೆಯನ್ನು 33.00 ಮೀ ಅಗಲಕ್ಕೆ ವಿಸ್ತರಿಸಬೇಕಾಗಿರುತ್ತದೆ. ವಾಹನ ಸಂಚಾರವು ಸರಾಗವಾಗಿ ಹರಿದು ಹೋಗುವಂತೆ ಮಾಡಲು ಈ ಸೇತುವೆಯ ಎರಡೂ ಬದಿಗಳನ್ನು ವಿಸ್ತಾರಗೊಳಿಸಲಾಗಿರುತ್ತದೆ. ಕರ್ನಾಟಕ ಸರ್ಕಾರದ ಕೊಳಚೆ ಮಂಡಳಿಯಿಂದ ಈ ಮೋರಿಯ ಬದಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ. ಈ ಕಟ್ಟಡಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕಾಗಿರುತ್ತದೆ. ಆದರೆ ಈ ಕಟ್ಟಡಗಳು ಮಳೆ ನೀರುಗಾಲುವೆಯ ಪಕ್ಕದಲ್ಲಿದ್ದು ಮಳೆಗಾಲದಲ್ಲಿ ನೀರು ಉಕ್ಕಿಹರಿದು ವಸತಿ ಪ್ರದೇಶಕ್ಕೆ ಹಾನಿ ತಟ್ಟುವ ಸಂಭವವಿರುತ್ತದೆ. ಈ ಪ್ರದೇಶವನ್ನು ಜಂಟಿಯಾಗಿ ಮಂಡಳಿಯ ಆಯುಕ್ತರವರು ಹಾಗೂ ಮಂಡಳಿಯ ಮುಖ್ಯ ಅಭಿಯಂತರರು ಪರಿಶೀಲಿಸಲಾಗಿ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಮೊದಲು

ಮಳೆ ನೀರುಗಾಲುವೆಗೆ ತಡೆಗೋಡೆಯನ್ನು ನಿರ್ಮಿಸಿ ನೀರು ಉಕ್ಕಿ ವಸತಿ ಪ್ರದೇಶಕ್ಕೆ ಹರಿಯುವುದನ್ನು ತಪ್ಪಿಸಬೇಕಾಗಿರುತ್ತದೆ.

ಆದ್ದರಿಂದ, ಮೇಲ್ಕಂಡ ಅನಾಹುತಗಳನ್ನು ತಪ್ಪಿಸಲು ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ.

1) ಕೋರಮಂಗಲ ಕಣಿವೆ ಕಾಲುವೆ K-100, ಸರಪಳಿ 5170 ಮೀ. ಲಷ್ಕರ್–ಹೊಸೂರು ರಸ್ತೆಗೆ ನ್ಯಾಷನಲ್ ಡೈರಿ ಕಾಂಪೌಂಡ್ ಹತ್ತಿರ ಹೊಸದಾಗಿ ಸೇತುವೆ ನಿರ್ಮಾಣ, ಅಂದಾಜು ಮೊತ್ತ ರೂ. 400.00 ಲಕ್ಷಗಳು
2) ಕೋರಮಂಗಲ ಕಣಿವೆ ಕಾಲುವೆ K-100, ಸರಪಳಿ 5034 ಮೀ. ನಿಂದ 5345ಮೀ. ವರೆಗೆ ಎಲ್.ಆರ್.ಸ್ಲಂ ಹತ್ತಿರ ಆರ್.ಸಿ.ಸಿ. ತಡಗೋಡೆ ನಿಮಾಣ, ಅಂದಾಜು ಮೊತ್ತ ರೂ. 485.00 ಲಕ್ಷಗಳು.
3) ಕೋರಮಂಗಲ ಕಣಿವೆ ಕಾಲುವೆ K-100, ಸರಪಳಿ 5345 ಮೀ. ನಿಂದ 5650 ಮೀ. ವರೆಗೆ ಎಲ್.ಆರ್.ಸ್ಲಂ ಹತ್ತಿರ ಆರ್.ಸಿ.ಸಿ. ಗೋಡೆ ನಿರ್ಮಾಣ ಅಂದಾಜು ಮೊತ್ತ ರೂ. 480.00 ಲಕ್ಷಗಳು.
4) ಕೋರಮಂಗಲ ಕಣಿವೆ ಕಾಲುವೆ K-100, ಸರಪಳಿ 5650ಮೀ. ನಿಂದ 5855ಮೀ. ವರೆಗೆ ಎಲ್.ಆರ್.ಸ್ಲಂ ಹತ್ತಿರ ಆರ್.ಸಿ.ಸಿ. ತಡೆಗೋಡೆ ನಿರ್ಮಾಣ ಅಂದಾಜು ಮೊತ್ತ ರೂ. 330.00 ಲಕ್ಷಗಳು.

ಆದ್ದರಿಂದ, ಮೇಲ್ಕಂಡ ಕಾಮಗಾರಿಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆಯನ್ನು ಕೋರಿದೆ.

1. ಒಟ್ಟು4 ಕಾಮಗಾರಿಗಳ ಅಂದಾಜು ಮೊತ್ತ ರೂ. 1695.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವುದು.
2. ಒಟ್ಟು 4 ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆ ಪ್ರಮಾಣ ಪತ್ರಕ್ಕೆ ಅನುಮೋದನೆ ನೀಡುವುದು.
3. ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಹಾಗೂ ಅಲ್ಪಾವಧಿ ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಲಾದ ವಿಶೇಷ ಆಯುಕ್ತರವರ ದಿನಾಂಕಃ 27–03–2012ರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ.**

## 09] ವಿಷಯ ಸಂಖ್ಯೆಃ01/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮಹದೇವಪುರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆಃ 150ರ ವ್ಯಾಪ್ತಿಗೆ ಬರುವ ಕೋರಮಂಗಲ ರಿಂಗ್ ರಸ್ತೆಯಿಂದ ಚಲ್ಲಘಟ್ಟ ಗ್ರಾಮ ಹಾಗೂ ಸುತ್ತಮುತ್ತಲಿನ ಸಂಪರ್ಕ ರಸ್ತೆಗಳು ರಸ್ತೆ ಅಭಿವೃದ್ಧಿ ಹಾಗೂ ತಡೆಗೋಡೆ ನಿರ್ಮಾಣದ (ರಿಟೈನಿಂಗ್‌ವಾಲ್) ಕಾಮಗಾರಿಯು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಅಗತ್ಯವಾಗಿದ್ದು ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸ್ಥಳೀಯ ಶಾಸಕರಾದ ಶ್ರೀ. ಅರವಿಂದ ಲಿಂಬಾವಳಿ ರವರು ಮಾನ್ಯ ಆಯುಕ್ತರಿಗೆ ದಿನಾಂಕಃ 22–09–2009ರಂದು ಪತ್ರ ಬರೆದು ಮನವಿ ಮಾಡಿರುತ್ತಾರೆ.

1. ಚಲ್ಲಘಟ್ಟದಿಂದ ಡಿಫೆನ್ಸ್ ಜಾಗದಲ್ಲಿ ಹಾದು ಹೋಗುವ ಮಾರ್ಗವಾಗಿ ಕೋರಮಂಗಲ ವರ್ತುಲ ರಸ್ತೆಯವರೆಗೆ.
2. ಚಲ್ಲಘಟ್ಟದ ಗಾಲ್ಫ್ ಕೋರ್ಸ್ ಸೇತುವೆಯಿಂದ ಕೆಂಪಾಪುರದವರೆಗೆ.

ಬೆಳ್ಳಂದೂರು ವಾರ್ಡಿನ ರಿಂಗ್ ರಸ್ತೆಯಿಂದ ಚಲ್ಲಘಟ್ಟದವರೆಗೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳ ಗ್ರಾಮಸ್ಥರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ರಸ್ತೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಯ ಸ್ಥಳವು ಬಿ.ಬಿ.ಎಂ.ಪಿ. ಹಾಗೂ ಭಾರತ ಸರ್ಕಾರದ ರಕ್ಷಣಾ ಇಲಾಖೆ ಮತ್ತು ಹೆಚ್.ಎ.ಎಲ್.ನ ಪ್ರದೇಶಕ್ಕೆ ಹೊಂದಿಕೊಂಡಿರುತ್ತದೆ.

ಈ ಕಾಮಗಾರಿಯ ಬಗ್ಗೆ ವರದಿಯನ್ನು ತಯಾರಿಸಿ ನೀಡಲು ಸಲಹೆಗಾರರಾದ M/s. Civil Tech consultants and Engineers Bangalore ಅವರಿಗೆ ಸೂಚಿಸಲಾಗಿತ್ತು. ಅದರಂತೆ, ಸಲಹೆಗಾರರು ಪ್ರಸ್ತಾಪಿಸಿರುವ ರಸ್ತೆಯನ್ನು ಸರ್ವೆ ಮಾಡಿ ಅಗತ್ಯ ಪರೀಕ್ಷೆಗಳನ್ನು ನಡೆಸಿ ಅಗತ್ಯವಿರುವ ಅಂಶಗಳನ್ನು ಅಳವಡಿಸಿಕೊಂಡು ಅಂದಾಜನ್ನು 2011–12ನೇ ಸಾಲಿನ ದರಪಟ್ಟಿಯನ್ನು ಅಳವಡಿಸಿಕೊಂಡು ರೂ. 400.00ಲಕ್ಷಗಳಿಗೆ ತಯಾರಿಸಿರುತ್ತಾರೆ.

**ಅಂದಾಜಿನಲ್ಲಿ ಈ ಕೆಳಕಂಡ ಲಿಂಕ್ ರಸ್ತೆಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.**

| | | |
|---|---|---|
| 1. | ಕೋರಮಂಗಲ ರಿಂಗ್ ರಸ್ತೆಯಿಂದ – ಚಲ್ಲಘಟ್ಟ ಸರ್ಕಲ್–( ಎಂಬಾಸ್ಸಿ ಪಾರ್ಕ್) ಮೂಲಕ | –800 ಮೀ |
| 2. | ಚಲ್ಲಘಟ್ಟ ರಸ್ತೆ – ವಿಂಡ್ ಟವರ್ ರಸ್ತೆ | –870 ಮೀ. |
| 3. | ಚಲ್ಲಘಟ್ಟ ಸ್ಮಶಾನದಿಂದ ಎಸ್.ಡಬ್ಲ್ಯೂ.ಡಿ ಯವರೆಗೆ | –180 ಮೀ. |
| 4. | ಚಲ್ಲಘಟ್ಟ ರಸ್ತೆ – ಎನ್.ಎ.ಎಲ್. ಗೇಟ್ ನ್ಯಾರೋ ರೋಡ್ ಡಿಆರ್‌ಡಿಒ ವರೆಗೆ | –1160 ಮೀ. |
| 5. | ಯಮಲೂರು ಬ್ರಿಡ್ಜ್‌ನಿಂದ ಕರಿಯಮ್ಮನ ಅಗ್ರಹಾರ ರಸ್ತೆಯವರೆಗೆ | –1100 ಮೀ. |
| 6. | ಯಮಲೂರು ಕರಿಯಮ್ಮನ ಅಗ್ರಹಾರ ಅಪ್ರೋಚಸ್ | –705 ಮೀ |
| | ಒಟ್ಟು | –4815 ಮೀ. |

ಅದಲ್ಲದೇ ಕೋರಮಂಗಲದಿಂದ ಚಲ್ಲಘಟ್ಟಕ್ಕೆ ಸೇರುವ ರಸ್ತೆಯ ಬಲಭಾಗದ ಜಾಗವು ಸುಮಾರು 5 ಮೀ.ಗಳು ಎತ್ತರವಿದ್ದು ಈ ಭಾಗಕ್ಕೆ ಸೂಕ್ತವಾಗಿ ರಕ್ಷಣಾ ಕಾಮಗಾರಿಯನ್ನು ಕೈಗೊಂಡ ನಂತರವೇ ರಸ್ತೆ ಕಾಮಗಾರಿಯನ್ನು ಕೈಗೊಳ್ಳುವಂತೆ ರಕ್ಷಣಾ ಇಲಾಖೆಯು ಕೋರಿರುವ ಹಿನ್ನಲೆಯಲ್ಲಿ ಸುಮಾರು 580 ಮೀ.ಗಳ ಉದ್ದಕ್ಕೆ ರಕ್ಷಣಾ ಗೋಡೆಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಒಟ್ಟಾರೆ 4815ಮೀ.ಗಳ ಉದ್ದದ ರಸ್ತೆಯನ್ನು ಅಭಿವೃದ್ಧಿ ಹಾಗೂ 850 ಮೀ. ಉದ್ದದ ರಕ್ಷಣಾ ಗೋಡೆಯನ್ನು ನಿರ್ಮಾಣ ಮಾಡಲು ಅಂದಾಜು ಪಟ್ಟಿಯಲ್ಲಿ ಪ್ರಸ್ತಾಪಿಸಲಾಗಿದೆ.

2010–11ನೇ ಸಾಲಿನ ಆಯವ್ಯದ ಪ್ರಧಾನ ಲೆಕ್ಕ ಶೀರ್ಷಿಕೆ "P 2304-ಕಾಮಗಾರಿ–ಮೂಲಭೂತ ಸೌಕರ್ಯಗಳ ಶಾಖೆ–ಕೋರಮಂಗಲ ರಿಂಗ್ ರಸ್ತೆಯಿಂದ ಚಲ್ಲಘಟ್ಟದವರೆಗೆ ರಸ್ತೆ ಅಗಲೀಕರಣ ಕಾಮಗಾರಿ–ಪಿ–ಸಂಖ್ಯೆ 2304/130ರಲ್ಲಿ ರೂ. 200.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಈ ಕಾಮಗಾರಿಗೆ, ಸಂಖ್ಯೆ: 150–11–000030 ಕಾಮಗಾರಿ ಸಂಕೇತ ಲಭ್ಯವಾಗಿದ್ದು, ಸದರಿ ಕಾಮಗಾರಿಯು ಅತ್ಯವಶ್ಯಕವಾಗಿ ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೀಡಿ ಕಾಮಗಾರಿಯನ್ನು ಪ್ರಾರಂಬಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. Construction of retaining wall and widening of road from Koramangala ring road to Challaghattra villages in w-150 Rs. 400.00 ಗಳಿಗೆ ಅನುಮೋದನೆ.

2. ಕಾಮಗಾರಿಯು ತುರ್ತಾಗಿದ್ದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಿರುವ ಕ್ರಮಕ್ಕೆ ಸ್ಥಿರೀಕರಣ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 10] ವಿಷಯ ಸಂಖ್ಯೆಃ02/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆಃ 181 ಕುಮಾರಸ್ವಾಮಿ ಲೇಔಟ್‌ನ Outer ring road ನಿಂದ pipe line ರಸ್ತೆಯ ವರೆಗೆ ಹರಿಯುತ್ತಿರುವ ಬೃಹತ್ ಮಳೆಕಾಲುವೆಯ ಕಾಮಗಾರಿಯನ್ನು (Construction of RCC U shape drain and culvert from outer ring road to pipe line road, behind Dayananda Sagar College, Kumarswamy Layout in ward NO:181) E-Procurement ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ. ಪ್ರಶಾಂತ. ಕೆ.ಸಿ. ಗುತ್ತಿಗೆದಾರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು ಅಂದಾಜುಪಟ್ಟಿಗೆ (2011–12ನೇ ಸಾಲಿನ ದರಪಟ್ಟಿ)ಹೋಲಿಸಿದಾಗ ಶೇಕಡ 7.72ರಷ್ಟು ಹೆಚ್ಚುವರಿಯಾಗಿರುತ್ತದೆ ಮತ್ತು Ist quarter issue rates of steel ಗೆ ಹೋಲಿಸಿದಾಗ ಶೇಕಡ 0.01ರಷ್ಟು ಹೆಚ್ಚುವರಿಯಾಗಿರುತ್ತದೆ. ಈ ದರಗಳು ಸ್ಪರ್ಧಾತ್ಮಕವಾಗಿರುತ್ತದೆ ಹಾಗೂ ಒಪ್ಪಬಹುದಾಗಿರುತ್ತರದೆ.

ಆದುದರಿಂದ ಶ್ರೀ. ಪ್ರಶಾಂತ.ಕೆ.ಸಿ. ಗುತ್ತಿಗೆದಾರರು ನಮೂದಿಸಿರುವ ಶೇಕಡ 7.72ರಷ್ಟು ಹೆಚ್ಚುವರಿ ದರ ರೂ. 1,52,89,418.50 ಲಕ್ಷಗಳಿಗೆ ಟೆಂಡರ್ ಅನುಮೋದನೆ ನೀಡಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ.**

## 11] ವಿಷಯ ಸಂಖ್ಯೆಃ03/2012–13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯದ ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆಃ 181 ಕುಮಾರಸ್ವಾಮಿ ಲೇಔಟ್‌ನ pipe line ರಸ್ತೆಯಿಂದ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ವರೆಗೆ ಹರಿಯುತ್ತಿರುವ ಬೃಹತ್ ಮಳೆಕಾಲುವೆಯ ಕಾಮಗಾರಿಯನ್ನು (Providing bed protection, jacketing and cover slab to storm water drain from Ch:1975 to 2225 from Kumaraswamy Layout BMTC Bus stop to 50 ft. road, in ward No:181) E-Procurement ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಶ್ರೀ. ವೀರವಾಸು. ಗುತ್ತಿಗೆದಾರರು, ಕಡಿಮೆ ದರಗಳನ್ನು ನಮೂದಿಸಿರುವುದರಿಂದ L1 ಆಗಿರುತ್ತಾರೆ. ಇವರು ನಮೂದಿಸಿರುವ ದರಗಳು ಅಂದಾಜುಪಟ್ಟಿಗೆ (2011–12ನೇ ಸಾಲಿನ ದರಪಟ್ಟಿ) ಹೋಲಿಸಿದಾಗ ಶೇಕಡ 2.02ರಷ್ಟು ಹೆಚ್ಚುವರಿಯಾಗಿರುತ್ತದೆ ಮತ್ತು Ist quarter issue rates of steel ಗೆ ಹೋಲಿಸಿದಾಗ ಶೇಕಡ 3.64ರಷ್ಟು ಹೆಚ್ಚುವರಿಯಾಗಿರುತ್ತದೆ. ಈ ದರಗಳು ಸ್ಪರ್ಧಾತ್ಮಕವಾಗಿರುತ್ತದೆ ಹಾಗೂ ಒಪ್ಪಬಹುದಾಗಿರುತ್ತರದೆ.

ಆದುದರಿಂದ ಶ್ರೀ. ವೀರವಾಸು. ಗುತ್ತಿಗೆದಾರರು ನಮೂದಿಸಿರುವ ಶೇಕಡ 3.64ರಷ್ಟು ಹೆಚ್ಚುವರಿ ದರ ರೂ. 75,18,362.13 ಲಕ್ಷಗಳಿಗೆ ಟೆಂಡರ್ ಅನುಮೋದನೆ ನೀಡಲು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 12] ವಿಷಯ ಸಂಖ್ಯೆ:04/2012-13

ವಿಶೇಷ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 47ರಲ್ಲಿನ ರೋಶನ್ ನಗರದಿಂದ ಇಂದಿರಾಪುರಂ ಮೂಲಕ ಬೃಹತ್ ಮಳೆ ನೀರು ಚರಂಡಿಯು ಹಾದು ಹೋಗುತ್ತಿರುತ್ತದೆ. ರೋಶನ್ ನಗರವು ಬೆಟ್ಟಗುಡ್ಡ ಪ್ರದೇಶಗಳಿಂದ ಕೂಡಿದ್ದು, ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯದೇ ತಗ್ಗು ಪ್ರದೇಶದಲ್ಲಿ ನಿಂತು ನಿಧಾನವಾಗಿ ಮುಂದೆ ಹರಿಯುತ್ತದೆ. ಸದರಿ ಪ್ರದೇಶವು ದಟ್ಟ ಜನಸಂಖ್ಯೆಯಿಂದ ಕೂಡಿದ್ದು, ಮಳೆಗಾಲದಲ್ಲಿ ತಗ್ಗಿನ ಪ್ರದೇಶದಲ್ಲಿ ನೀರು ಸರಾಗವಾಗಿ ಹರಿಯದೇ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ಅಪಾಯಕಾರಿಯಾಗುವುದರಿಂದ ತುರ್ತಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಸದರಿ ಪ್ರದೇಶವನ್ನು ಮಣ್ಣಿನಿಂದ ಮುಚ್ಚಿ ಆ ಭಾಗದಲ್ಲಿ ಬಾಕ್ಸ್ ಡ್ರೈನ್ ನಿರ್ಮಿಸಲು ಉದ್ದೇಶಿಸಲಾಗಿದೆ. ಮೇಲ್ಕಂಡ ಕಾಮಗಾರಿಗೆ KPWD 2010-11ನೇ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ರೂ. 65.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆ ಹಾಗೂ ಕಾಮಗಾರಿ ಸಂಕೇತ ಪಡೆಯಲಾಗಿದೆ.

ಈ ಕಾಮಗಾರಿಗೆ ದಿನಾಂಕ: 27-01-2011ರಂದು 6ನೇ ಬಾರಿ ಟೆಂಡರ್ ಅಧಿಸೂಚನೆಯನ್ನು E-procurement ಮೂಲಕ ಹೊರಡಿಸಲಾಯಿತು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವಾಗಿದ್ದ 09-02-2012ರಂದು ಶ್ರೀ. ಎನ್.ಎಸ್.ರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರು ಏಕೈಕ ಬಿಡ್ಡುದಾರರಾಗಿ ಟೆಂಡರ್ ಸಲ್ಲಿಸಿರುತ್ತಾರೆ.

ಸದರಿ ಗುತ್ತಿಗೆದಾರರು ಸಲ್ಲಿಸಿದ್ದ ದಾಖಲೆಗಳನ್ನು ಪರಿಶೀಲಿಸಲಾಗಿ ತಾಂತ್ರಿಕವಾಗಿ ಗುತ್ತಿಗೆದಾರರನ್ನು ಅರ್ಹರೆಂದು ಘೋಷಿಸಿದ ನಂತರ ಇವರು ಸಲ್ಲಿಸಿದ್ದ ಆರ್ಥಿಕ ಬಿಡ್‌ಗಳನ್ನು ದಿನಾಂಕ: 15-02-2012ರಂದು ತೆರೆಯಲಾಗಿ ಶ್ರೀ. ಎನ್.ಎಸ್.ರೆಡ್ಡಿ ರವರು ರೂ. 87,69,598-00ಗಳ ಗುತ್ತಿಗೆ ಮೊತ್ತವನ್ನು ನಮೂದಿಸಿದ್ದು, ತದನಂತರ ಸದರಿ ಗುತ್ತಿಗೆದಾರರೊಂದಿಗೆ ದರ ಸಂಧಾನ ನಡೆಸಿ ಒಟ್ಟಾರೆ. ರೂ. 76,77,347-00ಗಳಿಗೆ ಗುತ್ತಿಗೆ ಮೊತ್ತವನ್ನು ಕಡಿಮೆಮಾಡಿ ನಿಗದಿಗೊಳಿಸಲಾಗಿರುತ್ತದೆ.

ಏಕೈಕ ಬಿಡ್ಡುದಾರರಾಗಿರುವ ಶ್ರೀ.ಎನ್.ಎಸ್.ರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರ ಸಂಧಾನಿತ ಟೆಂಡರ್ ಮೊತ್ತವು 2010-11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಂತೆ ಸಿದ್ಧಪಡಿಸಿರುವ ಅನುಮೋದಿತ ಟೆಂಡರ್‌ಗಿಟ್ಟ ಮೊತ್ತ ರೂ. 60,73,672-00ಗಳಿಗೆ ಹೋಲಿಸಿದಾಗ ಶೇಕಡ 26.40ರಷ್ಟು ಹೆಚ್ಚಿಗೆ ಇರುತ್ತದೆ ಹಾಗೂ 2011-12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತವಾದ ರೂ. 68,57,206-00ಗಳಿಗೆ ಹೋಲಿಸಿದಾಗ ಶೇಕಡ 11.96ರಷ್ಟು ಹೆಚ್ಚಿಗೆ ಇರುವುದು ಕಂಡುಬಂದಿರುತ್ತದೆ.

ಸದರಿ ಪ್ರದೇಶ ಗುಡ್ಡ, ಕಡಿದಾದ ಕಣಿವೆ ಹಾಗೂ ಕಿರಿದಾದ ರಸ್ತೆಗಳಿಂದ ಕೂಡಿರುವುದರಿಂದ ಕೆಲಸದ ಪ್ರದೇಶಕ್ಕೆ ಸಾಮಗ್ರಿಗಳನ್ನು ಸಾಗಿಸಲು ಅತಿ ಕಷ್ಟಕರವಾಗಿರುವ ಹಿನ್ನಲೆಯಲ್ಲಿ 6ನೇ ಕರೆಗೆ ಏಕೈಕ ಬಿಡ್ಡುದಾರರು ಭಾಗವಹಿಸಿರುವ ಹಿನ್ನಲೆಯಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡುತ್ತಾ ಶ್ರೀ.ಎನ್.ಎಸ್.ರೆಡ್ಡಿ ರವರ ಸಂಧಾನಿತ ಟೆಂಡರ್ ಮೊತ್ತ ರೂ. 76,77,347-00(2011-12ನೇ ಸಾಲಿನ ದರಗಳಂತೆ ಪರಿಷ್ಕರಿಸಿ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 11.96ರಷ್ಟಯ ಹೆಚ್ಚಿಗೆ ಇದ್ದು) ಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ಟಿಪ್ಪಣಿ ಒಪ್ಪಿದೆ.**

## 13] ವಿಷಯ ಸಂಖ್ಯೆ:05/2012-13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಂಪಿಗೆ ರಸ್ತೆಯಲ್ಲಿ (ಸಂಪಿಗೆ ಚಿತ್ರಮಂದಿರ ಮುಂಭಾಗ) ಇತ್ತೀಚಗೆ ವಾಹನ ಸಂಚಾರವು ದಟ್ಟವಾಗಿ ಇರುವುದರಿಂದ ಮೋಟಾರು ವಾಹನಗಳು ಮುಕ್ತವಾಗಿ ಸಂಚರಿಸಲು ಅನಾನೂಕೂಲವಾಗುತ್ತಿದ್ದು,

ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಹಾಲಿ ಇರುವ ರಸ್ತೆಯನ್ನು ಎರಡೂ ಬದಿಯಲ್ಲಿ ಸುಮಾರು 6.50 ಮೀಟರ್‌ವರೆಗೂ ಅಗಲೀಕರಣಗೊಳಿಸಿ ಸುಗಮ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಡಲು ವಾರ್ಡ್ ಸಂಖ್ಯೆ: 95ರ ವ್ಯಾಪ್ತಿಯಲ್ಲಿ ಬರುವ ಸದರಿ ರಸ್ತೆ ಅಗಲೀಕರಣಗೊಳಿಸುವ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ ಕೋರಿ ಸಲ್ಲಿಸಿದೆ. ಈ ಅಂದಾಜು ಪಟ್ಟಿಯಲ್ಲಿ ರಸ್ತೆಯನ್ನು 6.50 ಮೀಟರ್‌ರಷ್ಟು ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವುದು. 1.20 ಮೀಟರ್ ಅಗಲದ ಆರ್.ಸಿ.ಸಿ. ಚರಂಡಿಯನ್ನು ನಿರ್ಮಿಸುವುದು ಹಾಗೂ ಇತರ ಅವಶ್ಯಕ ಕಾಮಗಾರಿಗಳಿಗೆ ಸ್ಥಳದ ಅವಶ್ಯಕತೆಯಂತೆ ಈ ಕೆಳಕಂಡ ಅಂದಾಜುಗಳನ್ನು ತಯಾರಿಸಲಾಗಿದೆ.

## ಕಾಮಗಾರಿಗಳ ವಿವರಗಳು

| Sl. No. | ward No | Name of the work | Est. cost in Lakhs |
|---|---|---|---|
| 1 | 95 | Proposed widening of road and construction of RCC drain at Sampige road between SWD and Sampige theatre signal chainage 0.00to 60.00 mtrs and to 236.00mtrs to 340mtrs in ward No:95 | 45.00 |
| 2 | 95 | Proposed widening of road and construction of RCC drain at Sampige road infront of Manthri square from chainage 60.00 mtrs to 236.00mtrs in ward No:95 | 45.00 |
| 3 | 95 | Proposed widening of road and construction of RCC drain at eastern side of Sampige road from chainage 0.00 mtrs to 155.00mtrs in ward No:95 | 45.00 |
| 4 | 95 | Proposed widening of road and construction of RCC drain & culverts at eastern side of Sampige road from chainage 155.00 mtrs to 305.00mtrs in ward No:95 | 45.00 |
| 5 | 95 | Proposed widening of road and construction of RCC drain at Southern side of south end road in ward No:95 | 45.00 |
| 6 | 95 | Proposed widening of road and construction of RCC drain (balance portion)at Southern side of southend road in ward No:95 | 45.00 |
| 7 | 95 | Proposed widening of road and construction of RCC drain at Northern side of south end road in ward No:95 | 45.00 |
| 8 | 95 | Proposed widening of road and construction of RCC drain (balance portion) at Northern side of south end road in ward No:95 | 45.00 |
| | | Total | **360.00** |

ಈ ಕಾಮಗಾರಿಗಳು ಬಹಳ ತುರ್ತಾಗಿದ್ದುದರಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಮೂಲಕ ಕೈಗೊಳ್ಳಲಾಗಿದೆ. ಈ ಕಾಮಗಾರಿಯನ್ನು ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಪಿ–0541ರ ಅಡಿಯಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.

ಪ್ರಸ್ತಾಪಿಸಿರುವ 8 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಕಾಮಗಾರಿ ಸಂಖ್ಯೆ ಹಾಗೂ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಮೂಲಕ ಕೈಗೊಂಡಿರುವ ಕ್ರಮಕ್ಕೆ ಅನುಮೋದನೆಯ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ

1. ಪ್ರಸ್ತಾಪಿಸಲಾಗಿರುವ 8 ಕಾಮಗಾರಿಗಳಿಗೆ (ಒಟ್ಟು ಮೊತ್ತ ರೂ. 360.00 ಲಕ್ಷಗಳು) ಆಡಳಿತಾತ್ಮಕ ಅನುಮೋದನೆ.
2. ಈ 8 ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಜಾಬ್‌ಸಂಖ್ಯೆ ನೀಡಲು ಅನುಮೋದನೆ.

3. ಕಾಮಗಾರಿಯು ಬಹಳ ತುರ್ತಾಗಿದ್ದುದರಿಂದ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಮೂಲಕ ಕೈಗೊಂಡಿರುವ ಕ್ರಮಕ್ಕೆ ಸ್ಥಿರೀಕರಣವನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

## 14] ವಿಷಯ ಸಂಖ್ಯೆಃ06/2012-13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆಃ 97 ದಯಾನಂದನಗರ ವ್ಯಾಪ್ತಿಯಲ್ಲಿ ಹಾಲಿ ಇರುವ ಬಿ.ಬಿ.ಎಂ.ಪಿ ರೆಫರೆಲ್ ಆಸ್ಪತ್ರೆ ಕಟ್ಟಡವು ಶಿಥಿಲಗೊಂಡಿದ್ದು ಕಟ್ಟಡಕ್ಕೆ ಕೆಲವು ತಾಂತ್ರಿಕ ಅಂಶಗಳನ್ನು ಮೆಃ ಎನ್.ಎಸ್.ಕನ್ಸಲ್ಟೆಂಟ್ಸ್ ಸಮಾಲೋಚಕರಿಂದ ಪಡೆದು ಕಟ್ಟಡದ ದುರಸ್ಥಿ ಕಾರ್ಯಕ್ಕಾಗಿ 2011-12ರ ಲೋಕೋಪಯೋಗಿ ಇಲಾಖೆಯ ದರ ಪಟ್ಟಿ ಅನ್ವಯ ರೂ. 100.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ ( Construction of Referral hospital at Srirampuram in ward NO-97 Dayanandanagar) 2010-11ನೇ ಸಾಲಿನ ಆಯವ್ಯಯದಲ್ಲಿ ರೂ. 100.00 ಲಕ್ಷಗಳನ್ನು (ಪಿ-1841) ಮೀಸಲಿರಿಸಲಾಗಿದ್ದು, ಹಾಗೂ ದಿನಾಂಕಃ 05-02-2011ರಂದು ಜಾಬ್ ಸಂಕೇತ 097-11-000020 ನೀಡಲಾಗಿರುತ್ತದೆ. ಈ ಅಂದಾಜಿನಲ್ಲಿ ಈ ಕೆಳಕಂಡ ಅಂಶಗಳನ್ನು ಅಳವಡಿಸಕೊಳ್ಳಲಾಗಿದೆ.

1. Dismantling works.
2. Roof strengthening works.
3. Repairs & Improvements works
4. Electrical works
5. water supply & sanitary works.

ಸಾರ್ವಜನಿಕ ಹಾಗೂ ಆಸ್ಪತ್ರೆಗೆ ಬರುವ ರೋಗಿಗಳ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸುವ ಬಗ್ಗೆ ಹಾಗೂ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿಯನ್ನು ಒಪ್ಪಿದೆ.**

## 15] ವಿಷಯ ಸಂಖ್ಯೆಃ 07 /2012-13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, Improvements road and drains from NH-7 to Jakkur Kaval road in ward No-07 Kodigehalli sub division, ಈ ಕಾಮಗಾರಿಯು 2010-11ನೇ ಸಾಲಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳಾಗಿರುವುದರಿಂದ ದಿನಾಂಕಃ 21-07-2011ರಲ್ಲಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿಸಮಿತಿಯಲ್ಲಿ ಅನುಮೋದನೆ ಆದ ಮೇರೆಗೆ, ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಿಂದ ಜಾಬ್ ಸಂಖ್ಯೆಃ 007-12-000036 ಅಡಿಯಲ್ಲಿ ರೂ. 150.00 ಲಕ್ಷಗಳಿಗೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ. ಮೊದಲನೇ ಎ-ಪ್ರಕ್ಯೂರ್‌ಮೆಂಟ್ ಟೆಂಡರ್‌ಅನ್ನು ಪ್ರಚುರಪಡಿಸಿದೆ.

| | | |
|---|---|---|
| 1. | ಕಾಮಗಾರಿಯ ಅಂದಾಜು ಮೊತ್ತ | -ರೂ. 150.00 ಲಕ್ಷಗಳು |
| 2. | ಟೆಂಡರ್‌ಗಿಟ್ಟ ಮೊತ್ತ | -ರೂ. 14994775.33 |
| 3. | ಅನುದಾನ | -P2019 Major road/arterial/sub arterial/ roads |
| 4. | ಕಾಮಗಾರಿ ಸಂಕೇತ ಸಂಖ್ಯೆ | -007-12-000036 |
| 5. | ಟೆಂಡರ್‌ನ ಸ್ವರೂಪ | -ಐಟಂ ವಾರು |

| | | |
|---|---|---|
| 6. | ಟೆಂಡರ್ ನೋಟಿಫಿಕೇಷನ್ ಸಂಖ್ಯೆ | -EE/BTP/BBMP/E-PROC/10/2011-12 Dt:16.11.2011 |
| 7. | ಟೆಂಡರ್ ನೋಟಿಫಿಕೇಷನ್ ಪ್ರಕಟವಾದ ದಿನಪತ್ರಿಕೆ | –ಪ್ರಜಾವಾಣಿ, ಟೈಮ್ಸ್ ಆಫ್ ಇಂಡಿಯಾ 17–11–2011 |
| 8. | ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸಿದ ದಿನಾಂಕ | -25-11-2011 ಸಮಯ 4–00 |
| 9. | ತಾಂತ್ರಿಕ ಬಿಡ್‌ಅನ್ನು ತೆರೆಯಲಾದ ದಿನಾಂಕ | -28-11-2011 |
| 10. | ಆರ್ಥಿಕ ಬಿಡ್ಡನ್ನು ತೆರೆದ ದಿನಾಂಕ | -30-11-2011 |
| 11. | ಟೆಂಡರ್ ಸಿಂಧುತ್ವದ ಅವಧಿ | -90 ದಿನಗಳು |

ಈ ಮೇಲ್ಕಂಡ ಕಾಮಗಾರಿಗೆ ಸಂಬಂಧಿಸಿದಂತೆ, ಅಪರ ಆಯುಕ್ತರು(ಯ.ವ) ರವರು ಆಡಳಿತಾತ್ಮಕ ಮಂಜೂರಾತಿಯನ್ನು ಸಂಖ್ಯೆಃ 71/11–12 ದಿನಾಂಕಃ 23–09–2011 ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಅಭಿಯಂತರರು(ಯ.ವ.) ರವರ ಮಂಜೂರಾತಿ ಸಂಖ್ಯೆಃ 76/–12 ದಿನಾಂಕ: 23.09.2011 ರಂದು ದೊರೆತಿದ್ದು ಸದರಿ ಕಾಮಗಾರಿಯನ್ನು ಐಟಂ ವಾರು ದರಗಳಂತೆ ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆಃ EE/BTP/BBMPE-PROC/10/2011-12 ದಿನಾಂಕಃ 16.11–2011ರಂತೆ ಕಾಮಗಾರಿ ಸಂಖ್ಯೆ 3135 ರಂತೆ ನಿಗದಿಪಡಿಸಿ ಭರ್ತಿ ಮಾಡಿದ ಟೆಂಡರ್ ಫಾರಂ ಗಳನ್ನು ದಿನಾಂಕಃ 28–11–2011 ಸಂಜೆ 4.00ರ ವರೆಗೆ ಸ್ವೀಕರಿಸಲಾಗಿದ್ದು, ಈ ಇ–ಪ್ರಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ದಿನಾಂಕಃ 30.11.2011ರಂದು 11.00ಕ್ಕೆ ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಶ್ರೀ. ಲೋಕೇಶ್‌ರಾಮಯ್ಯ ಏಕೈಕ ಗುತ್ತಿಗೆದಾರರರು ಟೆಂಡರ್‌ನಲ್ಲಿ ಭಾಗವಹಿಸಿಸ ಶೇಕಡ 3.43% ಹೆಚ್ಚುವರಿ ದರಗಳನ್ನು ನಮೂದಿಸಿ ಸಲ್ಲಿಸಿದ್ದು ನಿಯಮಾನುಸಾರ ಅನುಮೋದನೆಗಾಗಿ ಮುಖ್ಯ ಅಭಿಯಂತರವರಿಗೆ ಸಲ್ಲಿಸಲಾಗಿದ್ದು, ಆಯುಕ್ತರು ಬಿ.ಬಿ.ಬಿ.ಎಂ.ಪಿ ರವರು ದಿನಾಂಕಃ 28–01–2012ರಂದು ಏಕೈಕ ಬಿಡ್ ಆಗಿರುವುದರಿಂದ ಮರು ಟೆಂಡರ್ ಕರೆಯಲು ಆದೇಶಿಸಿದ ಮೇರೆಗೆ ಕೆಳಕಂಡಂತೆ 2ನೇ ಟೆಂಡರ್‌ಅನ್ನು ಕೆಳಕಂಡಂತೆ ಪ್ರಚುರಪಡಿಸಲಾಗಿದೆ.

ಮೇಲ್ಕಂಡ ಆದೇಶದನ್ವಯ 2ನೇ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟ ಸಂಖ್ಯೆಃ EE/BTP/BBMP E-PROC/14/2011-12 ದಿನಾಂಕಃ 10–02–2012ರಲ್ಲಿ 2ನೇ ಕರೆಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ ಎಂದು ಅಪರ ಆಯುಕ್ತರು, ಯಲಹಂಕ ವಲಯರವರು ತಿಳಿಸಿರುತ್ತಾರೆ.

| | | |
|---|---|---|
| 6. | ಟೆಂಡರ್ ನೋಟಿಫಿಕೇಷನ್ ಸಂಖ್ಯೆ | -EE/BTP/BBMP/E-PROC/14/2011-12 Dt:10.02.2012 |
| 7. | ಟೆಂಡರ್ ನೋಟಿಫಿಕೇಷನ್ ಪ್ರಕಟವಾದ ದಿನಪತ್ರಿಕೆ | –ಪ್ರಜಾವಾಣಿ, ಟೈಮ್ಸ್ ಆಫ್ ಇಂಡಿಯಾ 11–02–2012 |
| 8. | ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸಿದ ದಿನಾಂಕ | -01-03-2012 ಸಮಯ ಸಂಜೆ 4–00 |
| 9. | ತಾಂತ್ರಿಕ ಬಿಡ್‌ಅನ್ನು ತೆರೆಯಲಾದ ದಿನಾಂಕ | -08-03-2012 |
| 10. | ಆರ್ಥಿಕ ಬಿಡ್ಡನ್ನು ತೆರೆದ ದಿನಾಂಕ | -20-03-2012 |
| 11. | ಟೆಂಡರ್ ಸಿಂಧುತ್ವದ ಅವಧಿ | -90 ದಿನಗಳು |

ಈ ಕಾಮಗಾರಿಯನ್ನು ಐಟಂ ವಾರು ದರಗಳಂತೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಪ್ರಕಟಣೆ ಸಂಖ್ಯೆ EE/BTP/BBMP E-PROC/14/2011-12 ದಿನಾಂಕಃ 10–02–2012ರಂತೆ ಕಾಮಗಾರಿ ಇಂಡೆಂಟ್ ಸಂಖ್ಯೆಃ 3135 2ನೇ ಕರೆ ರಂತೆ ನಿಗದಿಪಡಿಸಿ ಭರ್ತಿ ಮಾಡಿದ ಟೆಂಡರ್ ಫಾರಂ ಗಳನ್ನು ದಿನಾಂಕಃ 08–03–2012ರಂದು ಸಂಜೆ 4.00ರ ವರೆಗೆ ಸ್ವೀಕರಿಸಲಾಗಿದ್ದು, ಸದರಿ ಇ–ಪ್ರಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ದಿನಾಂಕಃ20–03–2011ರಂದು ಸಂಜೆ 4.05ಕ್ಕೆ ತೆರೆಯಲಾಗಿದ್ದು ನಿಯಮಾನುಸಾರ

ಅನುಮೋದನೆಗಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಅಪರ ಆಯುಕ್ತರು, ಯಲಹಂಕ ವಲಯ ರವರು ತುಲನಾತ್ಮಕ ಪಟ್ಟಿಯೊಂದಿಗೆ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | ಟೆಂಡರ್ ಮೊತ್ತ ಲಕ್ಷಗಳಲ್ಲಿ | 2011–12ನೇ ಸಾಲಿನ ಎಸ್. ಆರ್. ದರಪಟ್ಟಿ ದರಗಳಿಗೆ ತುಲನೆ ಮಾಡಿದಾಗ | ಇ.ಎಂ.ಡಿ. ಪಾವತಿಸ ಬೇಕಾಗಿರುವ ಹಾಗೂ ಪಾವತಿಸಿದ ಮೊತ್ತ ಲಕ್ಷಗಳಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ಲಕ್ಷಗಳಲ್ಲಿ | ಶೇಕಡ ನಮೂದು ಮಂಜೂರಾದ ದರಗಳಿಗೆ 2010–11ನೇ ಸಾಲಿನ ಮಂಜೂರಾದ ದರಪಟ್ಟಿ ದರಗಳಿಗೆ | ಶೇಕಡ ನಮೂದು 2011–12ನೇ ಸಾಲಿನ ಎಸ್.ಆರ್. ದರಪಟ್ಟಿ ದರಗಳಿಗೆ |
|---|---|---|---|---|---|---|---|
| 1 | ಶ್ರೀ.ಆರ್.ಸತೀಶ್ (ಸತ್ಯ ಕನ್ಸ್ಟ್ರಕ್ಷನ್) | 149.94 | 160.01 | 1.50 | 147.43 | -1.68 | -7.86 |

ಮೇಲ್ಕಂಡ ಇ–ಪ್ರಕ್ಯೂರ್‌ಮೆಂಟ್ ನೊಂದಣಿ ಪಡೆದ ಗುತ್ತಿಗೆದಾರರಾದ ಶ್ರೀ.ಆರ್.ಸತೀಶ್ (ಸತ್ಯಾ ಕನ್ಸ್ಟ್ರಕ್ಷನ್) ರವರು ನಮೂದಿಸಿರುವ ದರಗಳು ಸ್ಪರ್ಧಾತ್ಮಕ ದರಗಳಾಗಿರುತ್ತದೆ. ಮತ್ತು ಅನುಮೋದಿತ ದರಗಳಿಗೆ 2010–11ನೇ ಸಾಲಿನ ಅನುಮೋದನೆಯಾದ ಅಂದಾಜುಪಟ್ಟಿಗೆ ಗುತ್ತಿಗೆದಾರರಾದ ಶ್ರೀ.ಆರ್.ಸತೀಶ್ (ಸತ್ಯಾ ಕನ್ಸ್ಟ್ರಕ್ಷನ್) ರವರು ಸೂಚಿಸಿರುವ ಗುತ್ತಿಗೆ ಮೊತ್ತವಾದ ರೂ. 1,47,43,053.84 ಅಥವಾ ಶೇಕಡಾ 1.68ರಷ್ಟು ಕಡಿಮೆ ಮೊತ್ತಗಳ ಹಾಗೂ 2011–12ನೇ ಸಾಲಿನ ದರಪಟ್ಟಿ ದರಗಳಿಗೆ ತುಲನೆ ಮಾಡಿದಾಗ ಶೇಕಡ 7.86 ಕಡಿಮೆ ಆಗಿರುವುದರಿಂದ ಟೆಂಡರ್ ಅನುಮೋದನೆಗಾಗಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾಗಿರುವ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರು (ಯೋಜನೆ) ಇವರ ಟಿಪ್ಪಣಿಯನ್ನು ಸಮಿತಿ ಒಪ್ಪಿದೆ.**

## 16] ವಿಷಯ ಸಂಖ್ಯೆಃ 08/2012–13

ಅಪರ ಆಯುಕ್ತರವರು (ಯೋಜನೆ) ಟಿಪ್ಪಣಿಯಲ್ಲಿ ವಿವರಿಸಿರುವಂತೆ, ರಿಚ್‌ಮಂಡ್ ರಸ್ತೆಯಲ್ಲಿ ಪೈಪ್‌ಲೈನ್ ಒಡೆದಿದ್ದುದರಿಂದ BWSSB ರವರು ಹೊಸ ಪೈಪ್‌ಲೈನ್ (UGD) ಅಳವಡಿಸುವ ಸಲುವಾಗಿ ರಸ್ತೆಯನ್ನು ಅಗೆದಿದ್ದು, ಪೈಪ್‌ಲೈನ್ ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿರುತ್ತದೆ. BWSSB ರವರು ಹೊಸ ಪೈಪ್‌ಲೈನ್ (UGD) ಅಳವಡಿಸುವ ಸಲುವಾಗಿ ರಸ್ತೆ ಭಾಗವನ್ನು ಪುನರ್‌ನಿರ್ಮಾಣ (Restoration) ಮಾಡಿರುವುದಿಲ್ಲ. ಇದರಿಂದ ವಾಹನ ಸಂಚಾರಕ್ಕೆ ಅಡೆತಡೆಯಾಗುತ್ತಿದ್ದು ಈ ರಸ್ತೆಯನ್ನು ಪುನರ್‌ನಿರ್ಮಾಣ ಮಾಡುವುದು ಅತಿ ಅವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ ರಿಚ್‌ಮಂಡ್ ರಸ್ತೆಗೆ ಈಗಾಗಲೇ ಮಂಜೂರಾಗಿರುವ ರೂ. 73.00 ಲಕ್ಷಗಳ ಡಾಂಬರೀಕರಣ ಕಾಮಗಾರಿಯನ್ನು ಮಾರ್ಪಾಡಿಸಿ ಅದೇ ರಸ್ತೆಯಲ್ಲಿ BWSSB ರವರು ರಸ್ತೆ ಅಗೆದಿರುವ ಭಾಗವನ್ನು ಪುನರ್‌ನಿರ್ಮಾಣ ಮಾಡುವ ಕಾಮಗಾರಿಗೆ (Aspahlting of Richmond road from Trinity circle to Lifestyle (Victoria Palani Road) in Shanthalanagar ward ಕಾಮಗಾರಿಯ ಬದಲಾಗಿ Restoration of Road Cut portion and asphalting of Richmond road from Trinity Road to Hosmat junction in Shanthalanagar Ward) ಬದಲಾವಣೆ ಮಾಡಿ ಮಾರ್ಪಾಡು ಅಂದಾಜು ಪಟ್ಟಿಯನ್ನು ರೂ. 44.50 ಲಕ್ಷಗಳಿಗೆ ತಯಾರಿಸಲಾಗಿದೆ. ಈ ಮೇರೆಗೆ ಮಾರ್ಪಾಡು ಅಂದಾಜು ಪಟ್ಟಿ ಮೊತ್ತ ರೂ. 44.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ಸದರಿ ಕಾಮಗಾರಿಯು ತುರ್ತಾಗಿ ನಿರ್ವಹಿಸ ಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆ ಮುಖಾಂತರ ನಿರ್ವಹಿಸಲು ಅನುಮೋದನೆ

ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿ.

**ನಿರ್ಣಯಃ ಅಪರ ಆಯುಕ್ತರು(ಯೋಜನೆ) ರವರ ಟಿಪ್ಪಣಿಯನ್ನು ಒಪ್ಪಿದೆ.**

**(ಜಿ.ಹೆಚ್.ರಾಮಚಂದ್ರ)**
ಅಧ್ಯಕ್ಷರು
ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

**ಪ್ರತಿಯನ್ನುಃ**

1. ಪೂಜ್ಯ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
2. ಉಪ ಮಹಾಪೌರವರ ಅವಗಾಹನೆಗೆ ಸಲ್ಲಿಸಿದೆ.
3. ಆಡಳಿತ ಪಕ್ಷ ನಾಯಕರು/ ವಿರೋಧ ಪಕ್ಷ ನಾಯಕರು/ ಜೆ.ಡಿ.ಎಸ್.ಪಕ್ಷ ನಾಯಕರಿಗೆ ಕಳುಹಿಸಿದೆ.
4. ಸಮಿತಿಯ ಎಲ್ಲಾ ಸದಸ್ಯರಿಗೆ ಕಳುಹಿಸಿದೆ.
5. ಆಯುಕ್ತರವರಿಗೆ ಕಳುಹಿಸಿದೆ.
6. ವಿಶೇಷ ಆಯುಕ್ತರವರಿಗೆ / ಅಪರ ಆಯುಕ್ತರು (ಯೋಜನೆ) ರವರಿಗೆ ಕಳುಹಿಸಿದೆ.
7. ಜಂಟಿ ಆಯುಕ್ತರು (ದಕ್ಷಿಣ & ಮಹದೇವಪುರ) ವಲಯ ರವರಿಗೆ ಕಳುಹಿಸಿದೆ.
8. ಪ್ರಧಾನ ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಮುಖ್ಯ ಲೆಕ್ಕಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
10. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಮುಖ್ಯ ಅಭಿಯಂತರರು, ಬೃಹತ್ ನೀರು ಗಾಲುವೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಕೌನ್ಸಿಲ್ ಕಾರ್ಯದರ್ಶಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.